ಎಂಬ ಹೆಮ್ಮೆಯಿಂದಿರುತ್ತಿದ್ದ ರಿಚಿ ಆಂಟಿಯೂ ಹಬ್ಬ ಹುಣ್ಣಿಮೆಗಳಲ್ಲಿ ಭಾರತೀಯ ಪೋಷಾಕು ಧರಿಸುತ್ತಿದ್ದಳು. ಜಾರ್ಜೆಟ್ಟಿನ ಬೆಲೆಬಾಳುವ ಸೀರೆಯ ಕಾಜು, ಮುತ್ತು, ಜರಿಯ ನಕ್ಷೆಯ ಕುಸುರಿ ಕೆಲಸ ಸೀರೆಗೆ ಹೊಂದುವಂತಹ ಕುತ್ತಿಗೆಯವರೆಗೆ ಮುಚ್ಚಿದ ಸ್ಲೀವ್‌ಲೆಸ್ ರವಿಕೆ, ಗಾಢ ಬಾದಾಮಿ ಬಣ್ಣದ ಕೂದಲ ಬಾಬ್‌ಕಟ್, ಎರಡೆಳೆಯ ಮುತ್ತಿನ ಸರ, ಕಿವಿಯಲ್ಲಿ ಮಿಂಚುವ ಚಿನ್ನದೋಲೆಗಳಲ್ಲಿ ರಿಚಿ ಆಂಟಿ ಬಣ್ಣದ ಗೊಂಬೆಯಂತೆ ಕಾಣುತ್ತಿದ್ದಳು. ನಿಕ್ ಅಂಕಲ್ ಮತ್ತು ಅವರೊಂದಿಗೆ ಖುಷಿಯ ದಿನ ಆಚರಿಸಲು ಬಂದ ಸಂಗಡಿಗರ ಪತ್ನಿಯರೂ ಆ ಸಂಭ್ರಮದಲ್ಲಿ ಭಾಗಿಯಾಗುತ್ತಿದ್ದರು. ಅವರೂ ಕುಸುರಿ ಕೆಲಸ ನಕ್ಷೆಗಳಿಂದ ತುಂಬಿದ ಬಿಳಿಯ ಸೀರೆ, ಅದರ ಮೇಲೊಂದು ಸ್ಲೀವ್‌ಲೆಸ್ ಬ್ಲೌಸ್ ಧರಿಸಿ, ಕೊರಳಲ್ಲಿ ಎರಡೆಳೆಯ ಮುತ್ತಿನಸರ ಧರಿಸಿದ, ಮುತ್ತಿನಂತೆ ಹೊಳೆಯುವ ದಂತಪಂಕ್ತಿಯಿಂದ ಹೊಳೆಯುವ ನಗುಮುಖದ ರಿಚಿ ಆಂಟಿಯನ್ನೇ ಮೆಚ್ಚಿಕೊಳ್ಳುತ್ತಿದ್ದರು. ಅವಳು ಚರ್ಚಿನಲ್ಲಿ ಉರಿಯುತ್ತಿರುವ ಬಿಳಿಯ ಮೇಣದ ಬತ್ತಿಯಂತೆ ಕಾಣುತ್ತಿದ್ದಳು. ಅದರಿಂದ ಸುಷಮಾ ರಿಚಿ ಆಂಟಿಯ ಸೌಂದರ್ಯ ಸವಿಯುತ್ತ ಕಣ್ಣೆವೆ ಮುಚ್ಚದೆ ನಿಂತು ಬಿಡುತ್ತಿದ್ದಳು. ರಾತ್ರಿ ಅವಳು ಕನಸಿನ ಲೋಕದಲ್ಲಿದ್ದಾಗ ಸ್ವರ್ಗದಿಂದಿಳಿದು ಬಂದ ಅಪ್ಸರೆ ರಿಚಿ ಆಂಟಿಯಂತೆಯೆ ಕಾಣುತ್ತಿದ್ದಳು.

...ಅವಳಿಗೆ ಚೆನ್ನಾಗಿ ನೆನಪಿದೆ. ನಿಕ್ ಅಂಕಲ್‌ನ ಸೋದರನ ಮಗಳ ಮದುವೆಯ ಸಂದರ್ಭದಲ್ಲಿ ರಿಚಿ ಆಂಟಿ ಬಿಳಿಯ ರೇಶಿಮೆಯ, ನಕ್ಷೆಯ ಲೇಸ್ ಹಚ್ಚಿದ ದೊಡ್ಡ ಸುತ್ತಳತೆಯುಳ್ಳ ನೆರಿಗೆಯ ಲಂಗ ತೊಟ್ಟುಕೊಂಡು ಬಂದಿದ್ದಳು. ಆ ಲಂಗದಲ್ಲಿ ಕಮಲದ ಎಸಳಿನಂತಿದ್ದ ಅವಳ ಕಾಲುಗಳು ಮುಚ್ಚಿ ಹೋಗಿದ್ದವು. ತಲೆಯ ಮೇಲೆ ಬಿಳಿಯ ಲೇಸಿನ ಅಂಚು ಇರುವ ಟೊಪ್ಪಿಗೆ, ಕೈಯಲ್ಲಿ ಅಂದವಾದ ಬಿಳಿಯ ಕೊಡೆ, ಸುಂದರ ಡಿಸೈನುಗಳಿಂದ ಕೂಡಿದ ಬಿಳಿಯ ಅಂಚುಳ್ಳ ಸೊಗಸಾದ ಕೈವಸ್ತ್ರ – ಎಲ್ಲವೂ ಅದ್ಭುತ, ಅಪೂರ್ವ. ಮದುವೆಯ ಮೆರವಣಿಗೆಯಲ್ಲಿ ವಿಲಿಯಮ್ಸ್ ಕುಟುಂಬದ ಜನ ಸಾಗುತ್ತಿರುವಾಗ ಸುಷಮಾ ತನ್ನ ಮನೆಯ ಗೇಟಿನ ಬಳಿ ಮಂತ್ರಮುಗ್ಧಳಾಗಿ ನೋಡುತ್ತ ನಿಂತಿದ್ದಳು. ಅವಳು ಮೂರು ವರ್ಷದ ತನ್ನ ತಮ್ಮನನ್ನು ಕಂಕುಳಲ್ಲಿಟ್ಟುಕೊಂಡಿದ್ದಳು. ಅವಳ ಮನೆಯ ಕೇರಳದ ಆಯಾ ಪುಷ್ಪಮ್ಮ ಪಕ್ಕದಲ್ಲಿ ನಿಂತಿದ್ದಳು. ಅವಳು ಹಠಾತ್, 'ಅಮ್ಮಾ ನೀನು ನಿನ್ನೆ ಕಥೆ ಹೇಳ್ತಿದ್ದೆಯಲ್ಲ ಸುಂದರ ರಾಜಕುಮಾರಿಯದು– ಗುಣ ರೂಪಗಳ ವರ್ಣನೆ ಮಾಡ್ತಿದ್ದೆಯಲ್ಲ ಅದೇ ರೀತಿ ಇದ್ದಾಳೆ ನೋಡು ನಮ್ಮ ರಿಚಿ ಆಂಟಿ' ಎಂದಿದ್ದಳು ಸುಷಮಾ. ಅವಳ ಪಕ್ಕದಲ್ಲಿ ನಿಂತ ಕಪ್ಪು ಕಪ್ಪಾದ ಪುಷ್ಪಮ್ಮ ವಿಸ್ಮಯದ ಕಣ್ಣುಗಳಿಂದ ಅವಳನ್ನೇ ನೋಡುತ್ತಿದ್ದಳು.

ಅಂದಿನಿಂದ ಆ ಕಥೆಗಳಲ್ಲಿ ಬರುವ ರಾಜಕುಮಾರಿಯಂತೆ ರಿಚಿ ಆಂಟಿ ಕಾಣತೊಡಗಿದಳು. ಕಥೆಯಲ್ಲಿರುವ ರಾಜಕುಮಾರಿಗೆ ರೆಕ್ಕೆಗಳಿರುತ್ತಿದ್ದವು, ರಿಚಿ ಆಂಟಿಗೆ ಇರಲಿಲ್ಲ, ಅಷ್ಟೆ.

ದೊಡ್ಡ ಖುಷಿಯ ದಿನಗಳಲ್ಲಿ ರಿಚಿ ಆಂಟಿ ತುಂಬ ಉತ್ಸಾಹದಿಂದಿರುತ್ತಿದ್ದರು. ಅನಂತರ ಬೆಳಗ್ಗೆ ಮತ್ತು ಸಂಜೆ ಬೇರೆ ಬೇರೆ ಕಾರ್ಯಕ್ರಮಗಳನ್ನಿಟ್ಟುಕೊಳ್ಳುತ್ತಿದ್ದರು. ಬೆಳಗ್ಗೆ ಆ ಮೊಹಲ್ಲಾದಲ್ಲಿರುವ ಚಿಕ್ಕಮಕ್ಕಳನ್ನು ಕರೆದು ತನ್ನ ಮಗ ಮಾರ್ಕ್ ಮತ್ತು ಮಗಳು ರೋಜಿಯನ್ನು ಸೇರಿಸಿ ಪಿಯಾನೊನಲ್ಲಿ ತರತರದ ಹಾಡು, ಪ್ರಾರ್ಥನೆ ನುಡಿಸುತ್ತ ಮಕ್ಕಳಿಂದಲೂ ಹಾಡಿಸುತ್ತಿದ್ದಳು. ರಿಚಿ ಆಂಟಿಯ ಸ್ವರ ಮಧುರವಾಗಿತ್ತು. ಅವಳು ಇಂಪಾಗಿ ಹಾಡುತ್ತಿದ್ದಳು. ಬೆಂಚಿನ ಮೇಲೆ ಕುಳಿತ ಸುಷಮಾಳಿಗೆ ಆಂಟಿಯ ಮಂಜುಳ ಸ್ವರ ಕೇಳಿದಂತಾಯಿತು. 'ಜಿಂಗಲ್ ಬೆಲ್ಸ್, ಜಿಂಗಲ್ ಬೆಲ್ಸ್ ಜಿಂಗಲ್ ಬೆಲ್ಸ್ ಆ ದ ವೇ' ನಿಕೂ ಅಂಕಲ್‌ನ ವಾಯ್‌ಲಿನ್ ಸ್ವರ ಆಂಟಿಯ ಪಿಯಾನೊ ಸ್ವರ ಸೇರಿ ಅಲ್ಲಿ ಸಂಗೀತಮಯ ವಾತಾವರಣವೇ ನಿರ್ಮಾಣವಾಗುತ್ತಿತ್ತು. ಅದರಲ್ಲಿ ರಸಿಕರು ಮಿಂದೇಳುತ್ತಿದ್ದರು. ಇದನ್ನೆಲ್ಲ ಯೋಚಿಸುತ್ತ ಕುಳಿತ ಸುಷಮಾಳ ಒಳಮನಸ್ಸು ಉತ್ಸಾಹದ ಕಾರಂಜಿ ಪುಟಿಸುತ್ತಿತ್ತು. ಆಗ ಅವಳು ರಿಚಿ ಆಂಟಿ ಪ್ರೀತಿಯಿಂದ ಕಲಿಸಿದ ಆ ಮಧುರ ಸ್ವರಗಳನ್ನು ಹೃದಯದಲ್ಲಿ ಹುಡುಕುತ್ತಿದ್ದಳು.